**ಬಾಂಗ್ಲಾದೇಶ ವಿಮೋಚನೆಗೆ ಮೊದಲು ಯುದ್ಧ ಅಪರಾಧಗಳಲ್ಲಿ ಭಾಗಿಗಳಾದವರಿಗೆ ಗಲ್ಲುಶಿಕ್ಷೆ ನೀಡುವಂತೆ ಆಗ್ರಹಿಸಿ 2013ರಿಂದ ಪ್ರತಿಭಟನೆಗಳು ಆರಂಭವಾದಾಗಿನಿಂದ ಕನಿಷ್ಠ ಏಳು ಮಂದಿ ಬ್ಲಾಗರ್‌ಗಳು ಮತ್ತು ಮಾನವಹಕ್ಕು ಹೋರಾಟಗಾರರ ಹತ್ಯೆಗೈಯಲಾಗಿದೆ. ಇವುಗಳಲ್ಲಿ ಕೇವಲ ಒಂದು ಪ್ರಕರಣದಲ್ಲಿ ಮಾತ್ರ ದೋಷಾರೋಪ ನಿರ್ಣಯವಾಗಿದೆ. ಜೀವಭಯದಿಂದ ತ್ರಸ್ತರಾದ ಅನೇಕ ಬ್ಲಾಗರ್‌ಗಳು ಮತ್ತು ಮಾನವ ಹಕ್ಕು ಹೋರಾಟಗಾರರು ಬಾಂಗ್ಲಾದೇಶ ಅಥವಾ ವಿದೇಶದಲ್ಲಿ ಭೂಗತರಾಗಿದ್ದಾರೆ. ಅಂತಹ ಓರ್ವ ಪಲಾಯನಗೈದಿರುವ, ಹೆಸರು ಬಹಿರಂಗಪಡಿಸಲು ಇಚ್ಛಿಸದ ಮಾನವ ಹಕ್ಕು ಹೋರಾಟಗಾರನೊಂದಿಗಿನ ಸ್ವಗತ ಇಲ್ಲಿದೆ.**

ಬರೆಯುವುದನ್ನು ಬಿಡು ಇಲ್ಲವಾದರೆ ಕೊಲೆಗೀಡಾಗುತ್ತಿ, ರಾಜಿಬ್ ಹೈದರ್‌ಗೇ ಏನಾಯಿತು ಎಂದು ನೋಡು ಎಂದು ಬೆದರಿಸುತ್ತಿದ್ದರು. ಹಾಗಾಗಿ ಇಂದು ನಾನು ಭೂಗತನಾಗಿದ್ದೇನೆ.

**ನಾನೇಕೆ ಪೊಲೀಸರ ಬಳಿ ಹೋಗಲಿಲ್ಲ..?**

ಇಲ್ಲ, ನಮ್ಮಲ್ಲಿ ಅನೇಕರು ಪೊಲೀಸರ ಬಳಿ ಹೋಗಲಿಲ್ಲ, ಕಾರಣ ಬಾಂಗ್ಲಾದೇಶದಲ್ಲಿ ಪೋಲೀಸರನ್ನು ಯಾರೂ ನಂಬುವುದಿಲ್ಲ. ನಾವು ದೂರು ನೀಡಿದರೆ ನಮ್ಮ ಮನೆಯ ಮುಂದೆ ನಾಮಕಾವಾಸ್ತೆ ಓರ್ವ ಪೇದೆಯನ್ನು ಪೋಲೀಸರು ನಿಯೋಜಿಸುತ್ತಾರೆ. ನನ್ನ ಚಲನವಲನಗಳ ಮಾಹಿತಿಯನ್ನು ಪೋಲೀಸರೇ ಮೂಲಭೂತವಾದಿಗಳಿಗೆ ನೀಡುವುದರಿಂದ ನಾನು ಇನ್ನೂ ಅವರ ಕೆಂಗಣ್ಣಿಗೆ ಗುರಿಯಾಗಬಹುದು. ಬಾಂಗ್ಲಾದೇಶದಲ್ಲಿ ಮೂಲಭೂತವಾದಿಗಳು ಆಗಾಗ ನಾಸ್ತಿಕರ ಹೆಸರಿನ ಪಟ್ಟಿಯನ್ನು ಬಿಡುಗಡೆ ಮಾಡುತ್ತಿರುತ್ತಾರೆ. ಪೋಲೀಸರು ಅವರ ವಿರುದ್ಧ ಕ್ರಮ ಕೈಗೊಳ್ಳಬಹುದಿತ್ತು. ಆದರೆ ಅದನ್ನು ಮಾಡಲಿಲ್ಲ. ಅವಿಜಿತ್ ರಾಯ್ ಹತ್ಯೆಯಾದರು, ನಜಿಬುಲ್ ಇಸ್ಲಾಮ್ ಕೊಲೆಗೀಡಾದರು, ಸಲಿಂಗಕಾಮಿಗಳ ಹಕ್ಕಿನ ಕುರಿತು ಹೋರಾಡುವ ಜುಲ್ಹಾಸ್ ಮನ್ನನ್ ಕೊಲೆಗೀಡಾದರು. 'ಇದು ಮುಸ್ಲಿಮ್ ರಾಷ್ಟ್ರ, ಸಲಿಂಗಕಾಮಿಗಳಿಗೆ ಈ ದೇಶದಲ್ಲಿ ಜಾಗವಿಲ್ಲ' ಎಂದು ಸ್ವಯಂ ಗೃಹಮಂತ್ರಿಗಳೇ ಹೇಳಿದರು. 'ಯಾರಾದರೂ ಏನಾದರೂ ಬರೆಯುವುದರಿಂದ ಹತ್ಯೆಯಾದರೆ ಸರ್ಕಾರ ಜವಾಬ್ದಾರನಾಗುವುದಿಲ್ಲ' ಎಂದು ಖುದ್ದು ಶೇಖ್ ಹಸೀನಾ ಹೇಳಿದರು. ಸಾಯಿಸುವ ಅನೇಕ ಮಾರ್ಗಗಳಿವೆ. ವಾಸ್ತವದಲ್ಲಿ ಕೊಲೆಯನ್ನು ಮಾಡುವ ವ್ಯಕ್ತಿ ಹಾಗೂ ಕೊಲೆಮಾಡಲು ಆದೇಶ ನೀಡುವ ವ್ಯಕ್ತಿ ಇಬ್ಬರೂ ಕೊಲೆಗಡುಕರೇ. ಬಲಿಯಾಗುವವರನ್ನು ರಕ್ಷಿಸಬೇಕಾದ ಸರ್ಕಾರ ರಕ್ಷಣೆ ನೀಡದಿದ್ದರೆ ಸರ್ಕಾರವೂ ಕೊಲೆಗೆ ಹೊಣೆಗಾರನಲ್ಲವೇ? ನನ್ನ ಅನಿಸಿಕೆ ಪ್ರಕಾರ ಸರ್ಕಾರವೂ ಕೂಡ ಕೊಲೆಗಾರ.

## ಹಿಫಾಜತ್-ಎ-ಇಸ್ಲಾಮ್ ಕುರಿತು ...

ಹಿಫಾಜತ್-ಎ-ಇಸ್ಲಾಮ್‌ನ ಅಮೀರ್ ಅಹ್ಮದ್ ಶಫಿ. ಆತ 13 ಅಂಶಗಳ ಬೇಡಿಕೆಯ ಪಟ್ಟಿಯನ್ನು ಸರ್ಕಾರದ ಮುಂದಿಟ್ಟಿದ್ದಾನೆ. ಗಣ ಜಾಗರಣ ಮಂಚ್ ಆಂದೋಲನವನ್ನು ನಿಲ್ಲಿಸಲು ಹಿಫಾಜತ್ ಕಾರಣ. ಇಂದು ಆತ ಬಾಂಗ್ಲಾದೇಶದಲ್ಲಿ ತುಂಬಾ ಪ್ರಭಾವವುಳ್ಳ ವ್ಯಕ್ತಿ. ಆತ ಹೇಳಿದ್ದೆಲ್ಲ ನಡೆಯುತ್ತದೆ. ಶೇಖ್ ಹಸೀನಾ ಉದಾರವಾದಿ ಪ್ರಗತಿಪರ ಎಂದು ನಾವು ಅಂದುಕೊಂಡಿದ್ದೆವು. ಆವಾಮಿ ಲೀಗ್ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕಾರಣದಿಂದ ನಾವು ಬೆಂಬಲಿಸುತ್ತೇವೆ. ಆದರೆ

## ಭವಿಷ್ಯ ಇನ್ನೂ ನಿರಾಶಾದಾಯಕ

ನಾನು ನಿಜವಾಗಿಯೂ ತುಂಬಾ ನಿರಾಶನಾಗಿದ್ದೇನೆ. ಪರಿಸ್ಥಿತಿ ಬದಲಾಗುತ್ತದೆ ಎಂದು ನಾನು ಹೇಳುವಂತಿದ್ದರೆ ತುಂಬಾ ಚೆನ್ನಾಗಿತ್ತು. ದುರದೃಷ್ಟವಶಾತ್ ನಾನು ಅದನ್ನು ಹೇಳಲಾರೆ. ನಾವು ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಿದ್ದರೂ ಮಧ್ಯಯುಗಕ್ಕೆ ನಾವು ಸಾಗುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಬುರ್ಖಾ ಧರಿಸುವ ಅನೇಕ ಮಹಿಳೆಯರನ್ನು ನಾವು ಕಾಣಬಹುದು. ಮೊದಲು ಹೀಗಿರಲಿಲ್ಲ. ನಾನೆನ್ನುವುದೇನೆಂದರೆ ಹಿಫಾಜತ್-ಎ-ಇಸ್ಲಾಮ್ 13 ಅಂಶಗಳ ಬೇಡಿಕೆಯ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರ ಏಕೆ ಇವರೊಂದಿಗೆ ವ್ಯವಹರಿಸಬೇಕು? ಈ ಬೇಡಿಕೆ ಪಟ್ಟಿಯ ಹಲವಾರು ಅಂಶಗಳು ನಿಧಾನವಾಗಿ ಜಾರಿಗೆ ಬರುತ್ತಿರುವುದನ್ನು ನಾವು ಕಾಣಬಹುದು. ಹಾಗೆಯೇ ಈ ಇಸ್ಲಾಮ್‌ವಾದಿಗಳು ಮತ್ತು ಹಿಫಾಜತ್-ಎ-ಇಸ್ಲಾಮ್‌ಗಳು ಪ್ರತಿದಿನ ಸರ್ಕಾರದಿಂದಲೇ ಪ್ರೋತ್ಸಾಹನೆ ಪಡೆಯುತ್ತಿವೆ. ಅವರ ಒಂದು ಬೇಡಿಕೆಯೆಂದರೆ ಹಿಂದೂ ಲೇಖಕರು ಯಾವುದೇ ಪಠ್ಯದಲ್ಲಿ ಇರಬಾರದು. ಸರ್ಕಾರ ಇದನ್ನು ಕೇಳಿತು ಮತ್ತು ನಿಜವಾಗಿ ಅನೇಕ ಹಿಂದೂ ಲೇಖಕರ ಬರಹಗಳನ್ನು ಪಠ್ಯದಿಂದ ತೆಗೆದುಹಾಕಿತು. ಯಾವುದೇ ನಾಸ್ತಿಕರು ಬರೆದ ಬರಹಗಳು ಪಠ್ಯದಲ್ಲಿ ಇರಬಾರದು ಎಂದು ಅವರು ಬೇಡಿಕೆ ಇಟ್ಟರು. ಉದಾಹರಣೆಗೆ ಹುಮಾಯುನ್ ಆಜಾದ್‌ರ ಒಂದು ಸುಂದರ ಕವನ ಪಠ್ಯದಲ್ಲಿತ್ತು. ಇಸ್ಲಾಮ್ ವಾದಿಗಳು ಹುಮಾಯುನ್ ಆಜಾದ್‌ರನ್ನು ನಾಸ್ತಿಕ ಎಂದು ಕರೆದದ್ದರಿಂದ ಸರ್ಕಾರ ಅವರ ಕವನವನ್ನು ತೆಗೆದುಹಾಕಿತು.

